# ಮುನ್ನೆಚ್ಚರಿಕೆಯ ಸೂಚನೆ

**ಅನಧಿಕೃತ ಖಾಸಗಿ ಸಂಸ್ಥೆಗಳು ಒದಗಿಸುವ ಅಕ್ರಮ ಮತ್ತು ಮೋಸದ ಸಾಲ ಸೆಟಲ್‌ಮೆಂಟ್/ಆಪ್ತಸಮಾಲೋಚನೆ ಸೇವೆಗಳ ಬಗ್ಗೆ ಎಚ್ಚರಿಕೆಯಿಂದಿರಿ.**

ಆತ್ಮೀಯ ಗ್ರಾಹಕರೇ,

ಮಾನ್ಯತೆ ಇಲ್ಲದ, ಅನಧಿಕೃತ ಖಾಸಗಿ ಸಂಸ್ಥೆಗಳು ("ಸಂಸ್ಥೆಗಳು") ಅಶಂಕಿತ ಗ್ರಾಹಕರನ್ನು (i) ವಿಶೇಷವಾಗಿ ಫೇಸ್‌ಬುಕ್ ಮತ್ತು ಟ್ವಿಟರ್‌ನಂತಹ ಸಾಮಾಜಿಕ ಮಾಧ್ಯಮದಲ್ಲಿ ಜಾಹೀರಾತುಗಳು; (ii) ಅವರ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು ಮತ್ತು ಶೋಧ ಇಂಜಿನ್‌ಗಳ ಮೂಲಕ (ಉದಾ: ಗೂಗಲ್ ಇತ್ಯಾದಿ) ಲಭ್ಯವಾಗುವಂತೆ ಮಾಡುವುದು; (iii) ಗೌರವಯುತ ಹಣಕಾಸು ಸಂಸ್ಥೆಗಳ ಬ್ರ್ಯಾಂಡ್ ಲೋಗೋ ಮತ್ತು ಟ್ರೇಡ್‌ಮಾರ್ಕ್ ದುರ್ಬಳಕೆ/ತಮ್ಮ ವೆಬ್‌ಸೈಟ್, ಸಮಾಜಿಕ ಮಾಧ್ಯಮದಲ್ಲಿ ಅನಧಿಕೃತ ಪ್ರಕಟಣೆ; (iv) ವೆಬ್‌ಸೈಟ್‌ನಲ್ಲಿ ನಕಲಿ ಪ್ರತಿಕ್ರಿಯೆಯನ್ನು ಪ್ರಕಟಿಸುವುದು ಮತ್ತು ಅಮಾಯಕ ಗ್ರಾಹಕರನ್ನು ಪ್ರೋತ್ಸಾಹಿಸಿ ತಮ್ಮ ಅಕ್ರಮ ಸಾಲ ಆಪ್ತಸಮಾಲೋಚನೆ ಸೇವೆಗಳನ್ನು ಪಡೆಯುವಂತೆ, ಮುಂಗಡ/ಹೆಚ್ಚುವರಿ ಫೀಗಳ ವಿನಿಮಯದೊಂದಿಗೆ ಹಣಕಾಸು ಸಂಸ್ಥೆಗಳಲ್ಲಿ ಅವರ ಸಾಲ ಮೊತ್ತವನ್ನು ಸೆಟಲ್‌ಮೆಂಟ್ ಮಾಡುವ ಹುಸಿ ಭರವಸೆಗಳ ಮೂಲಕ ಮೂಲಕ ಗುರಿಪಡಿಸುತ್ತಿದ್ದಾರೆ.

ತಮ್ಮ ಸಾಲ ಪಾವತಿಗಳಿಂದ ಸುಸ್ತಿದಾರರಾಗುತ್ತಿರುವ ಗ್ರಾಹಕರನ್ನು ಅಥವಾ ಸುಸ್ತಿದಾರರಾಗಲು ಉದ್ದೇಶಿಸಿದ ಗ್ರಾಹಕರನ್ನು ತಮ್ಮ ಮೋಸದ ಸಾಲ ಸೆಟಲ್‌ಮೆಂಟ್ ಸೇವೆಗಳು/ಪರಿಹಾರಗಳ ಮೂಲಕ ಗುರಿಪಡಿಸುತ್ತಿರುವ ಮತ್ತು ಗ್ರಾಹಕರಿಗೆ ('ಸಂತ್ರಸ್ತರು') ಆರ್ಥಿಕ ನಷ್ಟವನ್ನು ಉಂಟುಮಾಡುವ ಪ್ರಕ್ರಿಯೆಯಲ್ಲಿರುವ ಅನಧಿಕೃತ, ಮಾನ್ಯತೆ ಇಲ್ಲದ ಸಂಸ್ಥೆಗಳ ಬಗ್ಗೆ ಗ್ರಾಹಕರು ಮತ್ತು ಜನಸಾಮಾನ್ಯರಿಗೆ ನಾವು ಎಚ್ಚರಿಕೆ ನೀಡುತ್ತಿದ್ದೇವೆ.

ಈ ಸಂಸ್ಥೆಗಳ ಕಾರ್ಯನಿರ್ವಹಣೆಯು ಹೀಗಿರುತ್ತದೆ:

1. ಇಂತಹ ಸಂತ್ರಸ್ತರಿಗೆ ಸಹಾಯ ಮಾಡುವ ಉದ್ದೇಶದಿಂದ ಈ ಸಂಸ್ಥೆಗಳು ಸಾಲ ಮೊತ್ತವನ್ನು ಸೆಟಲ್‌ಮೆಂಟ್ ಮಾಡಲು ಸಹಾಯಕ್ಕಾಗಿ ಗ್ರಾಹಕರು ಮತ್ತು ಬ್ಯಾಂಕ್ ಅಥವಾ ಎನ್‌ಬಿಎಫ್‌ಸಿ ("ಸಾಲದಾತರು") ಮಧ್ಯೆ ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತೇವೆ ಎಂದು ಬಿಂಬಿಸಿಕೊಳ್ಳುತ್ತಾರೆ. ಈ ಸಂಸ್ಥೆಗಳು ನೀಡುವ ಹುಸಿ ಭರವಸೆಗಳೆಂದರೆ:

(i) ತಮ್ಮ ವಿಶೇಷ ಕಾನೂನು ಶಕ್ತಿಗಳನ್ನು ಬಳಸಿ ಅತ್ಯಂತ ಕಡಿಮೆ ಮೊತ್ತದಲ್ಲಿ ಸಾಲಗಳನ್ನು ಸೆಟಲ್‌ಮೆಂಟ್ ಮಾಡುವುದು;

(ii) ತಮ್ಮ ಕಾನೂನು ನೆರವನ್ನು ಬಳಸಿ ಗ್ರಾಹಕರ ಅಡಮಾನ ಇಟ್ಟಿರುವ ಸ್ವತ್ತುಗಳನ್ನು ಉಳಿತುಸುವುದು; ಮತ್ತು

(iii) ಕಪ್ಪುಪಟ್ಟಿಗೆ ಸೇರಿಸಿದ ಕಂಪನಿಯ ಭಾರಿ ಮೊತ್ತದ ಬಾಕಿಯನ್ನು ಗಮನಾರ್ಹವಾಗಿ ಕಡಿಮೆ ಮೊತ್ತಕ್ಕೆ ಸೆಟಲ್‌ಮೆಂಟ್ ಮಾಡುವುದು.

2. ಸಂತ್ರಸ್ತರು ತಮ್ಮ ಜೊತೆಗೆ ಕರಾರು/ದಾಖಲೆಯನ್ನು ಮಾಡಿಕೊಳ್ಳಬೇಕೆಂದು ಬಯಸುತ್ತಾರೆ ಮತ್ತು ಸಂತ್ರಸ್ತರ ಪರವಾಗಿ ವರ್ತಿಸುವಂತೆ ಅಧಿಕೃತ ಪತ್ರವನ್ನು ಬಯಸುತ್ತಾರೆ.

3. ಅವರು ಅಮಾಯಕ ಗ್ರಾಹಕರಿಗೆ ಈ ರೀತಿ ಮೋಸ ಮಾಡುತ್ತಾರೆ:

(a) 2 ತಿಂಗಳು ಅಥವಾ ಹೆಚ್ಚಿನ ಅವಧಿಗೆ ಇಎಂಐ ಪಾವತಿಗಳನ್ನು ನಿಲ್ಲಿಸುವಂತೆ ಪ್ರೇರೇಪಿಸುತ್ತಾರೆ ಮತ್ತು ಇದರ ಬದಲಿಗೆ ತಮ್ಮ ಮೋಸದ ಸಾಲ ಸೆಟಲ್‌ಮೆಂಟ್ ಪರಿಹಾರದ ಭಾಗವಾಗಿ ಇಂತಹ ಸಂಸ್ಥೆಯ ವಿಶೇಷ "ಸೆಟಲ್‌ಮೆಂಟ್" ಬ್ಯಾಂಕ್ ಖಾತೆಗೆ ಪಾವತಿ ಮಾಡುವಂತೆ ಪ್ರೇರೇಪಿಸುತ್ತಾರೆ;

(b) ತಮ್ಮ ಪರಿಣಿತಿಯಿಂದ ನಂಬಲಾಗದಷ್ಟು ಕಡಿಮೆ ಮೊತ್ತಕ್ಕೆ ಗ್ರಾಹಕರ ಸಾಲವನ್ನು ಸೆಟಲ್‌ಮೆಂಟ್ ಮಾಡುವುದಾಗಿ ಸಂಸ್ಥೆಗಳು ಭರವಸೆ ನೀಡುತ್ತವೆ;

(c) ಇಎಂಐ ಪಾವತಿ ಸುಸ್ತಿದಾರರಾದರೆ ಅಥವಾ ಕಡಿಮೆ ಇಎಂಐಗಳನ್ನು ಪಾವತಿ ಮಾಡಿದರೆ, ಗ್ರಾಹಕರ ಸಿಬಿಲ್ ದಾಖಲೆಗಳ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಭರವಸೆ ನೀಡುವುದು;

(d) ಅವರ ಕಾರ್ಯತಂತ್ರದ ಭಾಗವಾಗಿ, ಸಾಲದಾತರ ಕಾನೂನು/ನಿಯಮಾವಳಿ ಉಲ್ಲಂಘಿಸಿದ ಆರೋಪದಲ್ಲಿ ಹುಸಿ ಭರವಸೆಗಳೊಂದಿಗೆ ನೋಟಿಸ್‌ಗಳನ್ನು ನೀಡುತ್ತಾರೆ; ಮತ್ತು

(e) ಸಾಲದಾತರಿಂದ ಬರುವ ಯಾವುದೇ ಫೋನ್ ಕರೆಗಳನ್ನು ತಮಗೆ ವರ್ಗಾಯಿಸುವಂತೆ ಸಂತ್ರಸ್ತರಿಗೆ ತಿಳಿಸುತ್ತಾರೆ ಮತ್ತು ಕರೆಯಲ್ಲಿ ಸಾಲದಾತರೊಂದಿಗೆ ನಿಂದನೀಯವಾದ ರೀತಿಯಲ್ಲಿ ವರ್ತಿಸುತ್ತಾರೆ ಮತ್ತು ಇದನ್ನು ಸಾಲದಾತರು ಪುರಸ್ಕರಿಸುವುದಿಲ್ಲ.

ಇಂತಹ ಸಂಸ್ಥೆಗಳೊಂದಿಗೆ ಗ್ರಾಹಕರ ತೊಡಗಿಸಿಕೊಳ್ಳುವಿಕೆಯ ಹೊರತಾಗಿ, ಗ್ರಾಹಕರ ಬ್ಯಾಂಕ್ ಖಾತೆಯಲ್ಲಿ ಸೂಕ್ತ ಹಣವನ್ನು ಇಡದೇ ಇರುವುದರಿಂದ ಗ್ರಾಹಕರಿಂದ ಪಾವತಿ ಸೂಚನೆಗಳಿಗೆ ಅಗೌರವಿಸುವುದಕ್ಕೆ ಕಾರಣವಾಗುತ್ತದೆ, ಇದರಿಂದಾಗಿ:

(a) ಬ್ಯಾಂಕ್ ದಂಡ/ಫೀಗಳನ್ನು ವಿಧಿಸುತ್ತದೆ ಮತ್ತು ಕ್ರೆಡಿಟ್ ಬ್ಯಾಲೆನ್ಸ್ ಇದ್ದಾಗ ಗ್ರಾಹಕರ ಬ್ಯಾಂಕ್ ಖಾತೆಯಿಂದ ಡೆಬಿಟ್ ಮಾಡುತ್ತದೆ. ಬ್ಯಾಂಕ್‌ನಿಂದ ಇಂತಹ ಶುಲ್ಕ ವಸೂಲಾತಿಯು ಅದೇ ತಿಂಗಳು ಅಥವಾ ಹಲವು ತಿಂಗಳುಗಳ ಸಂಚಿತವಾಗಿ ಅಥವಾ ಯಾವುದೇ ಒಂದು ನಿರ್ದಿಷ್ಟ ತಿಂಗಳಂದು ನಡೆಯುತ್ತದೆ ಮತ್ತು

(b) ಇಂತಹ ಇಎಂಐ ಪಾವತಿ ಮಾಡದ್ದಕ್ಕೆ ಸಾಲದಾತರು ದಂಡ ಶುಲ್ಕವನ್ನು ವಿಧಿಸುತ್ತಾರೆ, ಇದನ್ನು ಗ್ರಾಹಕರು ಪಾವತಿ ಮಾಡಬೇಕಾಗುತ್ತದೆ.

ಇದರ ಪರಿಣಾಮವಾಗಿ, ಗ್ರಾಹಕರು ಇಎಂಐ ಮೊತ್ತದ ಮೇಲೆ ಹೆಚ್ಚುವರಿ ಹಣವನ್ನು ಪಾವತಿ ಮಾಡಬೇಕಾಗುತ್ತದೆ. ಇದೇ ಸಮಯದಲ್ಲಿ, ಗ್ರಾಹಕರ ಕ್ರೆಡಿಟ್ ದಾಖಲೆಯಲ್ಲಿ ಸಿಬಿಲ್ ರೇಟಿಂಗ್‌ನ ಋಣಾತ್ಮಕಪರಿಣಾಮವನ್ನು ಇಂತಹ ಪಾವತಿ ಮಾಡದಿರುವಿಕೆಯು ಉಂಟುಮಾಡಬಹುದು.

ಹಾಗೆಯೇ, ಗ್ರಾಹಕರು ಸಮ್ಮತಿಸಿದ ಸಾಲ ವ್ಯವಸ್ಥೆಯ ನಿಯಮ ಮತ್ತು ಷರತ್ತುಗಳಿಗೆ ಅನುಗುಣವಾಗಿಲ್ಲದ ಸಾಲ ಸೆಟಲ್‌ಮೆಂಟ್/ಆಪ್ತಸಮಾಲೋಚನೆ ಸಂಸ್ಥೆಗಳನ್ನು ಸಾಲದಾತರು ಗುರುತಿಸುವುದಿಲ್ಲ.

ಗ್ರಾಹಕರು ಮರುಪಾವತಿ ಮಾಡಬಹುದಾದ ಸಾಲ ಮೊತ್ತದ ಹೊರೆ ಮತ್ತು ಗ್ರಾಹಕರ ಕ್ರೆಡಿಟ್ ದರದ ಮೇಲೆ ಅಡ್ಡ ಪರಿಣಾಮ ಉಂಟಾಗುವುದರ ಹೊರತಾಗಿ, ಈ ಸಂಸ್ಥೆಗಳು ಯಾವುದೇ ಸೇವೆಗಳನ್ನು ನೀಡುವುದಿಲ್ಲ. ಇಂತಹ ಸೇವೆಗಳನ್ನು ಕಾನೂನಿನ ಅಡಿಯಲ್ಲಿ ಗುರುತಿಸಲಾಗುವುದಿಲ್ಲ ಹಾಗೂ ಇಂತಹ ಯಾವುದೇ ಕ್ರಮವನ್ನು ನಡೆಸಲು ಸಾಲದಾತರಿಂದ ಅಧಿಕಾರ ಪಡೆದಿರುವುದಿಲ್ಲ. ಅಮಾಯಕ ಸಂತ್ರಸ್ತರು ಕಠಿಣ ಪರಿಶ್ರಮದಿಂದ ಗಳಿಸಿದ ಹಣವನ್ನು ದುರ್ಬಳಕೆ ಮಾಡುವುದನ್ನು ಹೊರತುಪಡಿಸಿ, ಈ ಸಂಸ್ಥೆಗಳು ಯಾವುದೇ ಸೇವೆಗಳನ್ನು ನೀಡುವುದಿಲ್ಲ.

ಯಾವುದೇ ಅನಧಿಕೃತ/ಅಕ್ರಮ ರೀತಿಯ ಸಾಲ ಸೆಟಲ್‌ಮೆಂಟ್‌ನಿಂದಾಗಿ ಕ್ರೆಡಿಟ್ ದಾಖಲೆ ಕಳಪೆಯಾಗುವ ಗಮನಾರ್ಹ ಅಪಾಯವನ್ನು ಹೊಂದಿರುತ್ತದೆಯಾದ್ದರಿಂದ ತಮ್ಮ ವೆಬ್‌ಸೈಟ್‌ಗಳು ಮತ್ತು ವಿವಿಧ ಎಲೆಕ್ಟ್ರಾನಿಕ್/ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರಂಗಳಲ್ಲಿ ಹುಸಿ / ತಪ್ಪುದಾರಿಗೆಳೆಯುವ ಜಾಹೀರಾತುಗಳನ್ನು ಪ್ರಕಟಿಸುವ ಇಂತಹ ಅಕ್ರಮ ಮತ್ತು ಮೋಸದ ಸಂಸ್ಥೆಗಳ ಬಗ್ಗೆ ಎಚ್ಚರಿಕೆಯಿಂದಿರುವಂತೆ ಮತ್ತು ಯಾರಾದರೂ ಇಂತಹ ಹುಸಿ ಭರವಸೆಗಳು/ಕ್ಲೇಮ್‌ಗಳಿಗೆ ಮರುಳಾಗದಂತೆ ನಾವು ನಮ್ಮ ಗ್ರಾಹಕರಿಗೆ ತಿಳಿಸುತ್ತೇವೆ.

**ಎಚ್ಚರದಿಂದಿರಿ, ಸುರಕ್ಷಿತವಾಗಿರಿ.**

ಬಜಾಜ್ ಫೈನಾನ್ಸ್ ಲಿಮಿಟೆಡ್‌ನಿಂದ ಸಾರ್ವಜನಿಕ ಜಾಗೃತಿ ಸಲಹೆ

**BAJAJ FINANCE LIMITED**

SAVDHAAN RAHEIN SAFE RAHEIN